<u>ದಿನಾಂಕಃ **07.01.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು</u>.

<u>ಮುಂದುವರೆದ ಪಾಟೀ ಸವಾಲುಃ **1** ನೇ ಪ್ರತಿವಾದಿ ಪರ ಶ್ರೀ.ಎಮ್ .ವಿ.ಆರ್ ವಕೀಲರಿಂದಃ</u>

ನೀವು ಮತ್ತು ನಿಮ್ಮ ಅಣ್ಣ ತಮ್ಮಂದಿರು ಮಾಡಿಕೊಂಡ ವಿಭಾಗ ಪತ್ರ ಅದರಲ್ಲಿ ನಿಮ್ಮ ಸಹಿ ಇದೆ ಎಂದು ನಿಪಿ-6 ನ್ನು ಸಾಕ್ಷಿಗೆ ತೋರಿಸಲಾಗಿ ಪರಿಶೀಲಿಸಿ ನನ್ನ ಸಹಿ ಇದೆ ಎಂದು ಹೇಳಿರುತ್ತಾರೆ. ಸಹಿಯನ್ನು ನೀವು ಉಪ-ನೊಂದಣಾಧಿಕಾರಿಯವರ ಮುಂದೆ ಮಾಡಿದ್ದರಾ ಎಂದರೆ ಹೌದು. ನಿಮಗೆ ಕನ್ನಡ ಓದಲು ಬರುವುದಿಲ್ಲ ಎಂದರೆ ಸರಿ. ನಿಮಗೆ ನಿಪಿ-6 ರ ಅಂಶಗಳನ್ನು ಯಾರು ಓದಿ ಹೇಳಿದ್ದರು ಎಂದರೆ ಯಾರು ಓದಿ ಹೇಳಿರಲಿಲ್ಲ. ಪ್ರತಿವಾದಿ 2 ರವರ ಗಂಡ ಬಾಲುರವರು ನಿಮ್ಮ ಆಸ್ತಿಯ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಆಸ್ತಿಗೆ ಸಂಬಂಧ ಪಟ್ಟ ಎಲ್ಲಾ ದಾಖಲೆಗಳನ್ನು ಪ್ರತಿವಾದಿ 2 ರವರ ಗಂಡ ಬಾಲುರವರು ಮಾಡಿಸಿದ್ದರು ಎಂದರೆ ಸರಿ. ನಿಪಿ-7 ರ ಅಂಶಗಳು ನಿಮಗೆ ಗೊತ್ತಿದೆಯೆ ಎಂದರೆ ನಾನು ಉಪ-ನೊಂದಣಾಧಿಕಾರಿಯವರ ಕಚೇರಿಗೆ ಹೋಗಿ ಸಹಿ ಮಾಡಿದ್ದೆ, ದಾಖಲೆಯ ಅಂಶಗಳನ್ನು ಯಾರು ನನಗೆ ಓದಿ ಹೇಳಿರಲಿಲ್ಲ. ನೀವು ಎಲ್ಲಾ ದಾಖಲೆಗಳಿಗೂ ಉಪ-ನೊಂದಣಾಧಿಕಾರಿಯವರ ಕಚೇರಿಯಲ್ಲಿ ಅವರ ಎದುರಿಗೆ ಸಹಿ ಮಾಡಿದ್ದೀರಿ ಎಂದರೆ ಸರಿ. ನಿಪಿ-7 ಮತ್ತು 6 ರ ಎಲ್ಲಾ ಅಂಶಗಳನ್ನು ನ್ಯಾಯಾಲಯದಲ್ಲಿ ಸಾಕ್ಷಿಗೆ ಓದಿ, ಹೇಳಲಾಗಿ, ವಿವರಿಸಲಾಗಿ ಅವರು ನನ್ನ ಭಾಗಕ್ಕೆ ಯಾವುದೇ ಹಣವನ್ನು ಸಹ ಕೊಡದೆ ನನ್ನ ಬಳಿ ಉಪ-

ನೊಂದಣಾಧಿಕಾರಿಯವರ ಎದುರಿಗೆ ಸಹಿ ಮಾಡಿಸಿಕೊಂಡಿದ್ದರು. ನಿಪಿ-7 ನೀವೆ ಹಾಜರು ಪಡಿಸಿರುವ ದಾಖಲೆಯಲ್ಲಿ ಶಿವಲಿಂಗಂ ರವರು ರೂ. 3 ಲಕ್ಷ ಹಣ ಕೊಡಬೇಕೆಂದು ದಾಖಲೆ ಸಲ್ಲಿಸಿದ್ದೀರಿ ಎಂದರೆ ಸರಿ. ಅವರು ನನಗೆ ರೂ.3 ಲಕ್ಷ ಹಣ ಕೊಡಬೇಕು. ನಿಪಿ-7 ದಾಖಲೆ ನಿಮಗೆ ಯಾವಾಗ ಸಿಕ್ಕಿತ್ತು ಎಂದರೆ ಶಿವಲಿಂಗಂ ಮತ್ತು ಬಾಲುರವರು ಆಸ್ತಿಯನ್ನು ನೊಂದಣಿ ಮಾಡಿಸಿದ ದಿನವೇ ನಿಪಿ-7 ಸಿಕ್ಕಿತ್ತು. ನಿಪಿ-7 ನಿಮಗೆ ಯಾರು ಕೊಟ್ಟಿದ್ದರು ಎಂದರೆ ಪ್ರತಿವಾದಿ 2 ರವರ ಗಂಡ ಬಾಲುರವರು ಕೊಟ್ಟಿದ್ದರು. ನಿಪಿ-7 ದಾಖಲೆಯನ್ನು ನೀವೆ ಸೃಷ್ಟಿಸಿದ್ದೀರಿ ಎಂದರೆ ಸರಿಯಲ್ಲ. ನಿಪಿ-7 ರ ಪ್ರಕಾರ ರೂ.3 ಲಕ್ಷ ಹಣ ನಿಮಗೆ ಮಾತ್ರ ಬರಬೇಕು ಎಂದು ನಮೂದಾಗಿದೆ ಎಂದರೆ ನನ್ನ ತಂಗಿಗೂ ರೂ.3 ಲಕ್ಷ ಕೊಡಬೇಕು. ನಿಮ್ಮ ತಂಗಿಯ ಬಳಿಯೂ ನಿಪಿ-7 ರೀತಿ ದಾಖಲೆ ಇದೆಯೆ ಎಂದರೆ ಇಲ್ಲ. ಸಾಕ್ಷಿ ಮುಂದುವರೆದು ಬಾಲುರವರ ಮೇಲೆ ತುಂಬಾ ನಂಬಿಕೆ ಇಟ್ಟು ಎಲ್ಲಾ ಮಾಡಿದ್ದೇವು. ನೀವು ಉಪ-ನೊಂದಣಾಧಿಕಾರಿಯವರ ಸಹಿ ಮಾಡಿದಾಗ ಅವರು ಹಣ ತೆಗೆದುಕೊಂಡಿದ್ದರಾ ಎಂದು ನಿಮ್ಮನ್ನು ಕೇಳಿದ್ದರಾ ಎಂದರೆ ಏನೂ ಕೇಳಿರಲಿಲ್ಲ. ಶಿವಲಿಂಗಂ ರವರು ಏನೂ ಓದಿದ್ದಾರೆ ಎಂದರೆ 10 ನೇ ತರಗತಿವರೆಗೆ ಓದಿದ್ದಾರೆ. ಶಿವಲಿಂಗಂ ರವರಿಗೆ ಕಡಿಮೆ ಕೊಟ್ಟು ಪ್ರತಿವಾದಿ 2 ರವರ ಗಂಡ ಬಾಲುರವರು ಹೆಚ್ಚಿನ ಒಂದು ಫ್ಲೋರನ್ನು ಒಟ್ಟು 3 ಫ್ಲೋರಗಳನ್ನು ಯಾವ ಕಾರಣಕ್ಕೆ ತೆಗೆದುಕೊಂಡಿದ್ದಾರೆ ಎಂದರೆ ಅವರು ಅಣ್ಣ ತಮ್ಮ ಇಬ್ಬರೂ ಮಾತನಾಡಿಕೊಂಡು ತೆಗೆದುಕೊಂಡಿದ್ದಾರೆ.

**O.S. / 3566/2021**
**PW.1**

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದು ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ.**

**(ನಿಶಾ ರಾಣಿ ಎ. ಸಿ)**
**III ನೇ ಎ.ಸಿ.ಸಿ & ಎಸ್.ಜೆ,**
**ಬೆಂಗಳೂರು.**